**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆ** 289/2017 **CW**-36 **PW**-11

**ಸಾಕ್ಷಿಯನ್ನು ದಿಃ 17.06.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಹೆಸರುಃ | ಸಿ ಜೆ ರಂಗಸ್ವಾಮಿ |
| ತಂದೆಯ ಹೆಸರುಃ | ಲೇಟ್ ಜವರೇಗೌಡ |
| ವಯಸ್ಸುಃ | 66 ವರ್ಷ |
| ವೃತ್ತಿಃ | ನಿವೃತ್ತ ಎ ಸಿ ಪಿ |
| ವಾಸ ಸ್ಥಳಃ | ಬೆಂಗಳೂರು |

**ಮುಖ್ಯವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನಾನು ಮೇ 2016 ರಿಂದ ಸೆಪ್ಟೆಂಬರ್ 2016 ರವರೆಗೆ ನಾನು ಚನ್ನರಾಯಪಟ್ಟಣ ವೃತ್ತ ನಿರೀಕ್ಷಕನಾಗಿ ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 21.08.2016 ರಂದು ಮುಂದಿನ ತನಿಖೆಗಾಗಿ ಚಾಸಾ-35 ರವರಿಂದ ಕಡತವನ್ನು ಪಡೆದು ಪರಿಶೀಲಿಸಿರುತ್ತೇನೆ.

ಅದೇ ದಿನ ಮೃತ ನಂಜೇಗೌಡ ಮತ್ತು ಮಂಜೇಗೌಡ ರವರ ಪಿ ಎಮ್ ವರದಿಗಳನ್ನು ಚಾಸಾ-26 ಮತ್ತು ಚಾಸಾ-27 ರವರಿಂದ ಪಡೆದಿರುತ್ತೇನೆ.

ಸಾಕ್ಷಿ ಪಿ ಎಮ್ ವರದಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-13 ಮತ್ತು ನಿಪಿ-14 ಎಂದು ಸಾಕ್ಷಿಯ ಸಹಿಯನ್ನು ನಿಪಿ-13(ಎ) ಮತ್ತು ನಿಪಿ-14(ಎ) ಎಂದು ಗುರುತಿಸಲಾಯಿತು.

ಅದೇ ದಿನ ಚಾಸಾ-28 ರವರಿಂದ ಚಾಸಾ-1 ರವರ ಗಾಯದ ಪ್ರಮಾಣ ಪತ್ರವನ್ನು ಪಡೆದಿರುತ್ತೇನೆ.

ಸಾಕ್ಷಿ ಗಾಯದ ಪ್ರಮಾಣ ನೋಡಿ ಗುರುತಿಸಿದ್ದು, ಅದನ್ನು ನಿಪಿ–15 ಎಂದು ಸಾಕ್ಷಿಯ ಸಹಿಯನ್ನು ನಿಪಿ–15(ಎ) ಎಂದು ಗುರುತಿಸಲಾಯಿತು.

ದಿಃ 25.08.2016 ರಂದು ಚಾಸಾ–25 ರವರಿಂದ ಐ ಎಮ್ ವಿ ವರದಿಯನ್ನು ಪಡೆದಿರುತ್ತೇನೆ.

ಸಾಕ್ಷಿ ಐ ಎಮ್ ವಿ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ–16 ಎಂದು ಸಾಕ್ಷಿಯ ಸಹಿಯನ್ನು ನಿಪಿ–16(ಎ) ಎಂದು ಗುರುತಿಸಲಾಯಿತು.

ಅದೇ ದಿನ ಮುಂದಿನ ತನಿಖೆಗಾಗಿ ಚಾಸಾ–37 ರವರಿಗೆ ಹಸ್ತಾಂತರಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಮ್ ಎಸ್ ಡಿ ರವರಿಂದ ಃ**

ಸುಳ್ಳು ದಾಖಲೆಗಳನ್ನು ಪಡೆದು ಸುಳ್ಳು ತನಿಖೆ ಮಾಡಿ ಆರೋಪಿ ತಪ್ಪಿನಿಂದ ಅಪಘಾತವಾಗಿಲ್ಲ ಎಂದು ಕಂಡುಬಂದಿದ್ದರೂ ಸುಳ್ಳು ತನಿಖೆ ಮಾಡಿ, ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

**(ಕುಸುಮ ವಿ.)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.**